MEMBERS OF FINANCIAL COMMITTEES OF K.E.B.

159. SRI KAGODU THIMMAPPA (Sagar).—

Will the Minister for Public Works and Electricity be pleased to state .—

(*a*) since when the present members of Financial Committee of K. E. B. are serving in the said Committee;

(*b*) the amount being paid every year to the financial members towards residential accommodation ; whether there is any rule regarding this ;

(*c*) whether Government have noticed that the financial member has drawn House Building Advance from the Central Government for the construction of house ; whether it is a fact that there is a proposal to grant Rs. 80,000 from the Electricity Board to the said member for the construction of a house ;

(*d*) the number of appointments made in the Accounts Branch of the Board after this financial member taking over charge ?

SRI H. M. CHANNABASAPPA.—(Minister for Public Works and Electricity).

(*a*) Since 26-7-1970

(*b*) Residential accommodation is provided by the Board and 10 per cent of his pay is recovered from him towards rent.

(*c*) (i) Yes

(ii) Yes, but he has not drawn the H. B. A. from the Board.

(SRI H. M. CHANNABASAPPA)

(*d*) Gazetted-11 posts, besides upgrading 8 posts. Non-Gazetted :

(i) Class III	....	44 Posts
(ii) Class IV	....	7 Posts
Total	....	62 besides upgrading 8 Gazetted posts.

ಶ್ರೀ ಕಾಗೋಡು ತಿಮ್ಮಪ್ಪ —ಇಲ್ಲಿರುವ ಹಣಕಾಸಿನ ಸದಸ್ಯರು 1970 ರಿಂದ ಇದ್ದಾರೆಂದು ತಿಳಿಸಲಾಗಿದೆ. ಇನ್ನೆಷ್ಟು ದಿವಸಗಳ ಕಾಲ ಇವರು ಇರುತ್ತಾರೆ ಮತ್ತು ಇಲ್ಲಿರುವ ಸದಸ್ಯರ ಹೆಸರೇನು ಹೇಳುವುದಕ್ಕಾಗುತ್ತದೆಯೇ ?

†ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇವರ ಹೆಸರು ಶ್ರೀ ಕೃಷ್ಣಮೂರ್ತಿಗಳು ಎಂದು. ಇವರು ಬೋರ್ಡು ಎಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೋ ಅಲ್ಲಿಯವರೆಗೆ ಇವರೂ ಇರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇವರು ಇಲ್ಲಿಗೆ ಬಂದ ಮೇಲೆ ಸುಮಾರು 62 ಜನರನ್ನು ಹೆಚ್ಚು ಕೆಲಸಕ್ಕಾಗಿ ನೇಮಿಸಿದರು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಅಕೌಂಟ್ಸ್ ಡಿಪಾರ್ಟ್‌ಮೆಂಟಿಗೆ ಇದು ಅನಾವಶ್ಯಕವಾದ ಹುದ್ದೆಗಳು ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಾದುದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇವರಿಗೆ ಪ್ರತಿ ತಿಂಗಳೂ ವಸತಿಗಾಗಿ ಶೇಕಡಾ ಹತ್ತರಷ್ಟು ಅವರ ಸಂಬಳದಲ್ಲಿ ವಸೂಲು ಮಾಡುತ್ತೇವೆಂದು ಹೇಳಿದರೂ ಇದರ ಜೊತೆಗೆ ತಿಂಗಳಿಗೆ ಇವರಿಗೆ 800ರೂಪಾಯಿಗಳವರೆಗೂ ಸರಕಾರ ಕೊಡುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—800 ರೂಪಾಯಿ ಎನ್ನುವುದು ಸರಿಯಲ್ಲ. 750 ರೂಪಾಯಿಗಳವರೆಗೆ ಕೊಡಲಾಗುತ್ತಿದೆ

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಉತ್ತರದಲ್ಲಿರುವಂತೆ ಮೂರನೇ ದರ್ಜೆಗೆ 44 ಜನರು ಹಾಗೂ ನಾಲ್ಕನೆ ದರ್ಜೆಗೆ ಏಳು ಜನರನ್ನು ಇಲ್ಲಿ ನೇಮಕ ಮಾಡಿದ್ದಾರೆ. ಈ ಬೋರ್ಡಿನವರು ನೇಮಕಗಳನ್ನು ಮಾಡುವಾಗ ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ಸ್‌ಗಳಿಗೆ ಎಷ್ಟು ಜನರ ನೇಮಕವಾಗಬೇಕು ಇತರ ವರ್ಗಗಳವರು ಎಷ್ಟು ನೇಮಕ ಮಾಡಬೇಕು ಎನ್ನುವುದನ್ನು ನೋಡಿ ನೇಮಕ ಮಾಡಿದ್ದಾರೆಯೇ ಇಲ್ಲವೇ ಎಲ್ಲರನ್ನೂ ನೇರವಾಗಿ ನೇಮಕ ಮಾಡಿದ್ದಾರೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಬೋರ್ಡಿನವರು ರೆಕ್ರೂಟುಮೆಂಟು ಮಾಡುವಾಗ ಅದಕ್ಕೆ ವಿಧಿ ನಿಯಮಾವಳಿಗಳು ಇರುತ್ತವೆ. ಆ ವಿಧಿಗಳಿಗನುಸಾರವಾಗಿ ನೇಮಕಗಳನ್ನು ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಹಣಕಾಸಿನ ಸದಸ್ಯರು ಬಂದ ಮೇಲೆ ಇಲ್ಲಿ ಹುದ್ದೆಗಳನ್ನು ನಿರ್ಮಿಸಿ ಅದಕ್ಕೆ ನೇಮಕಗಳನ್ನು ಮಾಡುವಾಗ ಸ್ವಜನ ಪಕ್ಷಪಾತ ಹೆಚ್ಚಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದರಿಂದ ಈ ಸದಸ್ಯರನ್ನು ಬೇಗನೆ ನಿರ್ಗಮನ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ. ನೇಮಕಗಳನ್ನು ಮಾಡುವಾಗ ಒಬ್ಬ ಸದಸ್ಯರೇ ನೇರವಾಗಿ ಮಾಡಲಾಗುವುದಿಲ್ಲ. ಇದಕ್ಕೆ ತಕ್ಕ ವಿಧಿ ನಿಯಮಾವಳಿಗಳು ಇರುತ್ತವೆ. ಆ ವಿಧಿಗಳಿಗನುಸಾರವಾಗಿ ನೇಮಕಗಳನ್ನು ಮಾಡಬೇಕಾಗುತ್ತದೆ. ಇದನ್ನು ಅವರ ಮನಸ್ಸಿಗೆ ಇಚ್ಛಾನುಸಾರವಾಗಿ ಮಾಡಲು ಇದೇನೂ ಅವರ ಮನೆಯ ಕೆಲಸವಲ್ಲ.

S.C./S. T. AND O.B.C. EMPLOYEES WORKING IN STATE INDUSTRIAL CONCERNS

231. SRI P. P. HEGRE.—(Chikodi).—

Will the Minister for Industries and Parliamentary Affairs be pleased to state ;—

(*a*) the number of employees in the Industrial Concerns that are fully or partially owned by the Government in the State (industrywise information may be furnished);